**ಸಾಕ್ಷಿಯನ್ನು ದಿಃ 09.11.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಬದಲಾಗಿ ನಾನು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಾನು ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ಸರಿ ಮತ್ತು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಾಖಲೆಗಳನ್ನು ಗುರುತಿಸುವ ಬಗ್ಗೆ ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಪಿ.ಎಸ್ ವಕೀಲರಿಂದಃ

ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ **2012-2013** ನೇ ಸಾಲಿನ ಡಿಮಾಂಡ್ ರಿಜಿಸ್ಟರ್ ಹಾಜರುಪಡಿಸುತ್ತಿದ್ದೇನೆ ಅದನ್ನು ನಿಪಿ-**1** ಎಂದು, ಆಸ್ತಿ ತೆರಿಗೆಯ ಸ್ವಯಂ ನಿರ್ಧಾರನ ನಮೂನೆಯನ್ನು ನಿಪಿ-**2** ಎಂದು, ಎರಡು ರಸೀತಿಗಳನ್ನು ನಿಪಿ-**3** ಮತ್ತು ನಿಪಿ-**4** ಎಂದು, ಅಂಚೆ ಸ್ವೀಕೃತಿಯನ್ನು ನಿಪಿ-**5** ಎಂದು, ವಾದಿ ಪುರಸಭೆಗೆ ನೀಡಿದ ದೂರಿನ ಸ್ವೀಕೃತಿಯನ್ನು ನಿಪಿ-**6** ಎಂದು, ಮೂರು ಅಂಚೆ ರಸೀತಿಗಳನ್ನು ನಿಪಿ-**7** ರಿಂದ ನಿಪಿ-**9** ಎಂದು ಗುರುತಿಸಲಾಯಿತು.

ಮುಂದುವರೆದು ಮುಖ್ಯ ವಿಚಾರಣೆಗಾಗಿ ವಾದಿ ಪರ ವಕೀಲರು ಸಮಾಯಾವಕಾಶ ಕೋರಿದ್ದು ಮುಂದೂಡಲಾಯಿತು.

ಓ ಹೇ ಕೇ ಸ ಇದೆ

**ಸಿವಿಲ್ ನ್ಯಾಯಾಧೀಶರು,**

**ತಿ.ನರಸೀಪುರ.**